ಈ) ಹೌದು.

ಉ) ಸಹಾಯಕ ಕೃಷಿ ಅಧಿಕಾರಿಗಳು ಮತ್ತು ಕೃಷಿ ಸಹಾಯಕರುಗಳು ತರಬೇತಿ ಮತ್ತು ಕ್ಷೇತ್ರ ಸಂದರ್ಶನ ಮೂಲಕ ಸಂದೇಶಗಳನ್ನು ದುರ್ಬಲ ವರ್ಗದ ರೈತರಿಗೆ ಹಿಂದಿನ ಎರಡು ವರ್ಷಗಳಲ್ಲಿ ಕ್ರಮವಾಗಿ ಒಟ್ಟು ರೂ. 5,15,158.00ಗಳು ಮತ್ತು ರೂ. 5,92,453.00ಗಳನ್ನು ಖರ್ಚು ಮಾಡಲಾಗಿದೆ.

**ವಿಷಯ:- ಹುಬ್ಬಳ್ಳಿ–ಧಾರವಾಡ ಮಹಾನಗರದಲ್ಲಿ ಆಶ್ರಯ ಸಮಿತಿಯನ್ನು ರಚಿಸುವುದು.**

1123 (1916) **ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):-** ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಸಭೆ ವ್ಯಾಪ್ತಿಗೆ ಸಂಬಂಧಪಟ್ಟಂತೆ ಆಶ್ರಮ ಸಮಿತಿಯನ್ನು ರಚಿಸಲಾಗಿದೆಯೇ? ರಚಿಸದೇ ಇದ್ದಲ್ಲಿ ಅದಕ್ಕೆ ಕಾರಣಗಳೇನು?

ಆ) 1994-95 ಮತ್ತು 1995-96ನೇ ಸಾಲಿನಲ್ಲಿ ಆಶ್ರಯ ಯೋಜನೆಗಾಗಿ ಎಷ್ಟು ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ ಹಾಗೂ ಎಷ್ಟು ನಿವೇಶನಗಳನ್ನು ಹಂಚಲಾಗಿದೆ?

**ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು):-**

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಪ್ರದೇಶದಲ್ಲಿ ಪ್ರತ್ಯೇಕವಾದ ಆಶ್ರಯ ಸಮಿತಿಯನ್ನು ನೇಮಿಸಿರುವುದಿಲ್ಲ. ಹುಬ್ಬಳ್ಳಿ ತಾಲ್ಲೂಕು ಮಟ್ಟದ ಆಶ್ರಯ ಸಮಿತಿ ಹಾಗೂ ಧಾರವಾಡ ತಾಲ್ಲೂಕು ಮಟ್ಟದ ಆಶ್ರಯ ಸಮಿತಿಯನ್ನು ರಚಿಸಲಾಗಿದೆ. ಸರ್ಕಾರ ಈಗ ತೀರ್ಮಾನವನ್ನು ಕೈಗೊಂಡು ಜಿಲ್ಲಾ ಮಟ್ಟದ ವಸತಿ ಸಮನ್ವಯ ಸಮಿತಿಯನ್ನು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನೇಮಿಸಿದೆ. ಈ ಸಮಿತಿಯು ಸಂಬಂಧಪಟ್ಟ ಪುರಸಭೆ: ನಗರಸಭೆ: ಮಹಾನಗರ ಪಾಲಿಕೆಗಳೊಂದಿಗೆ ಸಮಾಲೋಚಿಸಿ ಪಟ್ಟಣ ಪ್ರದೇಶಗಳಲ್ಲಿ ಸೂಕ್ತ ಜಮೀನನ್ನು ನಿವೇಶನಗಳಿಗಾಗಿ ಗುರುತಿಸುವುದಲ್ಲದೆ ನಿವೇಶನಗಳ ಹಂಚಿಕೆ ಪ್ರಗತಿಯನ್ನು ಗಮನಿಸುತ್ತದೆ. ಈ ಸಂಬಂಧವಾಗಿ ಸರ್ಕಾರದಿಂದ ಆಗತ್ಯವಾದ ಆದೇಶವನ್ನು ಹೊರಡಿಸಲಾಗುತ್ತಿದೆ.

ಆ) 1994-95 ಮತ್ತು 1995-96ನೇ ಸಾಲಿನಲ್ಲಿ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಪ್ರದೇಶಗಳಲ್ಲಿ 700 ನಿವೇಶನಗಳನ್ನು ರಚಿಸಲಾಗಿದೆ. ಈ ನಿವೇಶನಗಳನ್ನು ಫಲಾನುಭವಿಗಳನ್ನು ಗುರುತಿಸಿದ ನಂತರ ಹಂಚಿಕೆ ಮಾಡಲಾಗುವುದು. ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ನಗರ ಭೂ ಪರಿಮಿತಿ ಕಾಯ್ದೆಯನ್ವಯ ಲಭ್ಯವಿರುವ ಆರು ಎಕರೆ ಜಮೀನು ಪಡೆಯಲು ಪ್ರಯತ್ನ ನಡೆಯುತ್ತಿದೆ. ಇದಲ್ಲದೆ ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ಜಮಿನನ್ನು ಪಡೆದು ನಿವೇಶನಗಳನ್ನು ಹಂಚುವ ಪ್ರಯತ್ನ ನಡೆದಿದೆ.